ರಾಯಚೂರು ವಿಶ್ವವಿದ್ಯಾಲಯ RAICHUR UNIVERSITY
ಯರಗೇರಾ–584133, ರಾಯಚೂರು, ಕರ್ನಾಟಕ ರಾಜ್ಯ, ಭಾರತ
https://raichuruniversity.ac.in ಆಡಳಿತ ವಿಭಾಗ registrarrur@gmail.com

ಕ್ರ.ಸಂ. ರಾವಿರಾ/ಆಡಳಿತ/ಸಿಂಡಿಕೇಟ್ ಸಭೆ/2022–23/ ದಿನಾಂಕ: 07/07/2022

ಗೆ
ಮಾನ್ಯ ಸಿಂಡಿಕೇಟ ಸದಸ್ಯರುಗಳು,
ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.

ಮಾನ್ಯರೇ,

ವಿಷಯ: ದಿನಾಂಕ: 07.07.2022ರಂದು ಮಧ್ಯಾಹ್ನ 02.00 ಗಂಟೆಗೆ ರಾಯಚೂರು ವಿಶ್ವವಿದ್ಯಾಲಯದಲ್ಲಿ ಜರುಗಿದ ಸಿಂಡಿಕೇಟ ಸಾಮಾನ್ಯ ಸಭೆಯ ನಡಾವಳಿಗಳು.

*****

ದಿನಾಂಕ: 07.07.2022ರಂದು ಮಧ್ಯಾಹ್ನ 02.00 ಗಂಟೆಗೆ ರಾಯಚೂರು ವಿಶ್ವವಿದ್ಯಾಲಯದಲ್ಲಿ ಜರುಗಿದ ಸಿಂಡಿಕೇಟ ಸಾಮಾನ್ಯ ಸಭೆಯ ನಡಾವಳಿಗಳನ್ನು ಇದರೊಂದಿಗೆ ಲಗತ್ತಿಸಲಾಗಿದೆ.

ತಮ್ಮ ವಿಶ್ವಾಸಿ
ಪ್ರೊ. ವಿಶ್ವನಾಥ ಎಂ.,
ಕುಲಸಚಿವರು
ರಾಯಚೂರು ವಿಶ್ವವಿದ್ಯಾಲಯ, ರಾಯಚೂರು

ಅಡಕ: ನಡಾವಳಿಗಳು.

ಪ್ರತಿಗಳು :

1. ಮಾನ್ಯ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2. ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ, (ವಿಶ್ವವಿದ್ಯಾಲಯಗಳು), ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ, ಬೆಂಗಳೂರು – 560 001.
3. ಕುಲಸಚಿವರು (ಮೌಲ್ಯಮಾಪನ), ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
4. ಗ್ರಂಥಪಾಲಕರು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
5. ಹಣಕಾಸು ಅಧಿಕಾರಿಗಳು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
6. ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
7. ಉಪ–ಕುಲಸಚಿವರು, ಆಡಳಿತ/ವಿದ್ಯಾಮಂಡಲ/ಪರೀಕ್ಷಾ ವಿಭಾಗ, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
8. ಕುಲಪತಿಗಳ ಆಪ್ತ ಕಾರ್ಯದರ್ಶಿ/ಕುಲಸಚಿವರ ಆಪ್ತ ಸಹಾಯಕರು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
9. ಕಛೇರಿ ಕಡತಕ್ಕೆ.

## ಸಿಂಡಿಕೇಟ್ ಸಭೆಯ ನಡವಳಿಗಳು

ದಿನಾಂಕ 07.07.2022 ರಂದು ಗುರುವಾರ ಮಧ್ಯಾಹ್ನ 02.00 ಗಂಟೆಗೆ ರಾಯಚೂರು ವಿಶ್ವವಿದ್ಯಾಲಯದ ಆಡಳಿತ ಕಚೇರಿಯಲ್ಲಿ ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡವಳಿಗಳು.

### ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು

| | |
|---|---|
| 1. ಪ್ರೊ. ಹರೀಶ ರಾಮಸ್ವಾಮಿ, ಮಾನ್ಯ ಕುಲಪತಿಗಳು | ಅಧ್ಯಕ್ಷರು |
| 1. ಶ್ರೀ. ಶಿವಬಸಪ್ಪ ಮಾಲಿಪಾಟೀಲ | ಸಿಂಡಿಕೇಟ್ ಸದಸ್ಯರು |
| 2. ಶ್ರೀ. ನಾಗೇಂದ್ರ ಪ್ರಸಾದ | ಸಿಂಡಿಕೇಟ್ ಸದಸ್ಯರು |
| 3. ಶ್ರೀಮತಿ ಕಾವೇರಿ ಕೇದಾರನಾಥ್ | ಸಿಂಡಿಕೇಟ್ ಸದಸ್ಯರು |
| 4. ಪ್ರೊ. ವೈ.ಎಂ.ಭಜಂತ್ರಿ | ಸಿಂಡಿಕೇಟ್ ಸದಸ್ಯರು |
| 5. ಶ್ರೀ ಶಂಕರ ರೆಡ್ಡಿ ಜಿ. | ಸಿಂಡಿಕೇಟ್ ಸದಸ್ಯರು |
| 6. ಪ್ರೊ. ಎಂ. ಯರಿಸ್ವಾಮಿ, ಕುಲಸಚಿವರು(ಮೌಲ್ಯಮಾಪನ) | ಸಿಂಡಿಕೇಟ್ ಸದಸ್ಯರು |
| 7. ಡಾ. ರಾಘವೇಂದ್ರ ಫತೇಪೂರ | ವಿಶೇಷ ಆಹ್ವಾನಿತರು |
| 8. ಪ್ರೊ. ವಿಶ್ವನಾಥ ಎಂ.ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |

ಮೊದಲನೆಯದಾಗಿ ಕುಲಸಚಿವರು ಸಭಾ ಅಧ್ಯಕ್ಷರಾದ ಮಾನ್ಯ ಕುಲಪತಿಗಳನ್ನು ಹಾಗೂ ಸಭೆಗೆ ಆಗಮಿಸಿದ ಸಿಂಡಿಕೇಟ್ ಸದಸ್ಯರುಗಳನ್ನು ಸ್ವಾಗತಿಸಿ, ಸಭೆ ನಡೆಸಿಕೊಂಡು ಹೋಗಲು ಮಾನ್ಯ ಕುಲಪತಿಗಳಲ್ಲಿ ವಿನಂತಿಸುವದರೊಂದಿಗೆ ಸಭೆಯು ಪ್ರಾರಂಬವಾಯಿತು

| ಕಲಂ / ಐಟಂ ನಂ. | ವಿಷಯ | ಸಿಂಡಿಕೇಟ್ ನಿರ್ಣಯ |
|---|---|---|
| 01 | 2022–23ನೇ ಶೈಕ್ಷಣಿಕ ಸಾಲಿಗೆ ಆನ್‌ಲೈನ್ ಮೂಲಕ ಸಂಯೋಜನಾ ಅರ್ಜಿ ಸಲ್ಲಿಸಿದ 195 ಕಾಲೇಜುಗಳ ಸ್ಥಳಿಯ ತನಿಖಾ ಸಮಿತಿಗಳು ಕಾಲೇಜಿಗೆ ಭೌತಿಕವಾಗಿ ಭೇಟಿ ನೀಡಿ ತಪಾಸಣೆ ಮಾಡಿ ಆನ್‌ಲೈನ್ ಪೋರ್ಟಲ್‌ನಲ್ಲಿ ಮಾಹಿತಿಯನ್ನು ದಾಖಲಿಸಿ ವರದಿ ಸಲ್ಲಿರುತ್ತಾರೆ ಸದರಿ ಕಾಲೇಜುಗಳ Score Card ಕಾ ಹಾಗೂ ಸ್ಥಳೀಯ ತನಿಖಾ ಸಮಿತಿಯವರ Observations and Recommendations ಗಳ ವಿವರಗಳನ್ನು ಕರ್ನಾಟಕ ಸರ್ಕಾರದ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಪ್ರಕರಣ 59ರ ಪ್ರಕಾರ ಸಿಂಡಿಕೇಟ್ ಸಭೆಯ ಅವಗಾಹನೆಗಾಗಿ ಮತ್ತು ಅನುಮೋಧನೆ ಕುರಿತು. | 2022–23ನೇ ಶೈಕ್ಷಣಿಕ ವರ್ಷಕ್ಕಾಗಿ ಆನ್‌ಲೈನ್ ಮೂಲಕ ಸಂಯೋಜನಾ ಅರ್ಜಿ ಸಲ್ಲಿಸಿದ ಒಟ್ಟು 195 ಕಾಲೇಜುಗಳ ಪೈಕಿ 191 ಕಾಲೇಜುಗಳು ಕಾಲೇಜು ಪಡೆದ ಸಂಯೋಜನಾ ಅಂಕಗಳ ವಿವರವನ್ನು ಸಭೆ ಪರಾಮರ್ಶಿಸಿತು<br>ಈ ವಿಷಯದ ಕುರಿತು ವಿದ್ಯಾವಿಷಯಕ ಪರಿಷತ್‌ನ ನಿರ್ಣಯವಾದ<br>"ಪ್ರತಿಶತ 40 ಮತ್ತು ಅದಕ್ಕಿಂತ ಹೆಚ್ಚು ಸಂಯೋಜನಾ ಅಂಕ ಪಡೆದ 132 ಮಹಾವಿದ್ಯಾಲಯಗಳಿಗೆ ಮಾತ್ರ 2022–23ನೇ ಶೈಕ್ಷಣಿಕ ಸಾಲಿಗೆ ಸ್ನಾತಕ ಪದವಿ ಕೋರ್ಸುಗಳ ಮೊದಲನೇ ವರ್ಷಕ್ಕೆ ಪ್ರವೇಶಾತಿ ಅವಕಾಶವನ್ನು ನೀಡಬೇಕೆಂದು ಹಾಗೂ ಪ್ರತಿಶತ 40 ಮತ್ತು ಅದಕ್ಕಿಂತ ಕಡಿಮೆ ಅಂಕ ಸಂಯೋಜನಾ ಪಡೆದ 59 ಕಾಲೇಜುಗಳಿಗೆ 2022–23ನೇ ಶೈಕ್ಷಣಿಕ ಸಾಲಿಗೆ ಸ್ನಾತಕ ಪದವಿ ಕೋರ್ಸುಗಳ ಪ್ರಥಮ ವರ್ಷಕ್ಕೆ ಪ್ರವೇಶವನ್ನು ನಿರ್ಭಂದಿಸಬೇಕು ಸಭೆಯು ಸರ್ವಾನುಮತದಿಂದ ಒಪ್ಪಿಗೆಯನ್ನು ಸೂಚಿಸಿತು" ಕುರಿತು ವಿವರವಾಗಿ ಚರ್ಚಿಸಲಾಯಿತು ಮತ್ತು ಸಭೆಯು ಸರ್ವಾನುಮತದಿಂದ ಈ ಕೆಳಗಿನಂತೆ ನಿರ್ಣಯಗಳನ್ನು ಅನುಮೋದಿಸಿತು.<br>1. ಪ್ರತಿಶತ 30 ಮತ್ತು ಅದಕ್ಕಿಂತ ಕಡಿಮೆ ಸಂಯೋಜನಾ ಅಂಕಗಳನ್ನು ಪಡೆದ 15 ಮಹಾವಿದ್ಯಾಲಯಗಳಿಗೆ 2022–23ನೇ ಶೈಕ್ಷಣಿಕ ಸಾಲಿಗೆ ಸ್ನಾತಕ ಪದವಿ ಕೋರ್ಸುಗಳ ಪ್ರಥಮ ವರ್ಷಕ್ಕೆ ಪ್ರವೇಶವನ್ನು ನಿರ್ಭಂದಿಸಬೇಕು.<br>2. ಪ್ರತಿಶತ 30 ಕ್ಕಿಂತ ಹೆಚ್ಚು ಮತ್ತು 45 ಕ್ಕಿಂತ ಕಡಿಮೆ ಸಂಯೋಜನಾ ಅಂಕಗಳನ್ನು ಗಳಿಸಿದ 74 ಮಹಾವಿದ್ಯಾಲಯಗಳಿಗೆ ಸಿಂಡಿಕೇಟ್ ಸದಸ್ಯರುಗಳ |

| | | |
|---|---|---|
| | | ಉಪ ಸಮಿತಿಯನ್ನು ರಚಿಸಿ ಸದರಿ ಮಹಾವಿದ್ಯಾಲಯಗಳಿಗೆ ಬೇಟಿ ನೀಡಿ ಸೀಮಿತ ಕಾಲಾವದಿಯೊಳಗೆ ಶೈಕ್ಷಣಿಕ ಸುಧಾರಣೆಗಳು ಮಾಡಿಕೊಂಡು ಸರ್ವಾಂಗೀಣ ಅಭಿವೃದ್ದಿಗೆ ಯಾವ ಯಾವ ಕ್ರಮಗಳನ್ನು ಮಾಡಿಕೊಳ್ಳಬೇಕು ಎಂಬುದರ ಬಗ್ಗೆ ಸಲಹೆ ಮತ್ತು ನಿರ್ದೇಶವನ್ನು ನೀಡಬೇಕೆಂದು ನಿರ್ಧರಿಸಲಾಯಿತು. |

(ಪ್ರೊ. ವಿಶ್ವನಾಥ ಎಂ)
ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು
ರಾಯಚೂರು ವಿಶ್ವವಿದ್ಯಾಲಯ,ರಾಯಚೂರು

(ಪ್ರೊ. ಹರೀಶ್ ರಾಮಸ್ವಾಮಿ)
ಕುಲಪತಿಗಳು ಹಾಗೂ ಅಧ್ಯಕ್ಷರು
ರಾಯಚೂರು ವಿಶ್ವವಿದ್ಯಾಲಯ,ರಾಯಚೂರು